**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ.763/2023 ಪ್ರಾ.ಸಾ -- 5 ಚಾ.ಸಾ – 6**

**ದಿನಾಂಕ: 25-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ ಹೆಚ್. ಎಸ್ |
| ತಂದೆಯ ಹೆಸರು | : | ಶಿವಲಿಂಗೇಗೌಡ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಅಬಕಾರಿ ನೀರಿಕ್ಷಕರು ತಿಪಟೂರು ಉಪ ವಿಭಾಗ |
| ವಾಸಸ್ಥಳ | : | ತಿಪಟೂರು |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ**

ನಾನು ವಂಬರ್ 2022 ರಿಂದ ಪ್ರಸ್ತುತ ಇಲಿಲಯವರೆಗೆ ತಿಪಟೂರು ಉಪ ವಿಭಾಗ ದಲಿಲ ಅಬಕಾರಿ ನಿರೀಕ್ಷಕ ಆಗಿ ಕರ್ತವ್ಯ ನಿರ್ವಹಿ ಸುತ್ತಿದ್ದೇನೆ.

ದಿನಾಂಕ 07-12-2022 ರಂದು ಚಾಸಾ-1 ರವರಿಂದ ಪ್ರಕರಣದ ಕಡತವನ್ನು ವಹಿಸಿಕೊಂಡಿರುತ್ತೇನೆ. ದಿನಾಂಕ 08-12-2022 ರಂದು ಸದರಿ ಕೃತ್ಯ ನೆಡೆದ ಮನೆಯ ಮಾಲೀಕತ್ವದ ವರದಿ ಕೋರಿ ಚಾಸಾ- 5 ರವರಿಗೆ ಮನವಿ ಪತ್ರ ಬರೆದಿರುತ್ತೇನೆ. ದಿನಾಂಕ 12-12-2022 ರಂದು ಹುಚ್ಚಗೊಂಡನಹಳ್ಳಿಯ ಚಾಸಾ-5 ರವರು ವರದಿನೀಡಿರುತ್ತಾರೆ. ಸದರಿ ವರದಿಯಲ್ಲ ಮನೆಗೆ ಸಂಬಂದ ಪಟ್ಟಂತೆ ಯಾವುದೇ ದಾಖಲಾತಿಗಳು ಲಭ್ಯವಿಲ್ಲವೆಂದು ವರದಿಯನ್ನು ನೀಡಿರುತಾರೆ.

ಈ ಸಂಬಂದ ದಿಃ02-01-2023 ರಂದು ಆರೋಪಿಗೆ ನೊಟೀಸನ್ನು ನೀಡಿರುತ್ತೇನೆ, ದಿನಾಂಕ 04-01-2023 ರಂದು ಅರೋಪಿತಯಿ ಹೇಳಿಕೆಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಪಂಚರಾದ ಚಾಸಾ-2 ಮತುತ 3 ರವರ ಹೇಳಿಕೆಯನ್ನು

ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 16-01-2023 ರಂದು ಈ ಪ್ರಕರಣದ ಎಫಐಸಿ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿಯು ನಿಗದಿತ ಮಿತಿಗಿಂತ ಹೆಚ್ಚಿನ ಮದ್ಯವನ್ನು ಮಾರಾಟದ ಉದ್ದೇಶಕ್ಕೆ ದಾಸ್ತಾನು ಮಾಡಿಕೊಂಡಿರುತ್ತಾನೆಂದು ಅರೋಪಿಯ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ನಾ ಯಾಲಯಕ್ಕೆ ಸಲಿಲಸಿರುತ್ತೇನೆ.

ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಮತ್ತು ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಕಡತದಲ್ಲಿರುವ ಚಾಸ--5 ರವರಿಗೆ ನೀಡಿದ ನಿವೇದನಾ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 10 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸ--5 ರವರಿಗೆ ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 11 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಗೆ ನೀಡಿದ ನೋಟೀಸನು ನೋಡಿ ಗುರುತಿಸಿದ್ದು, ಅದನ್ನು ನಿಪಿ 12 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 12 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲರುವ ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 13 ಎಂದು ಹಾಗೂ ಸಾಕ್ಷಿಯ ಸೀಕೃತಿ ಸಹಿಯನ್ನು ನಿಪಿ 13(ಎ) ಎಂದು ಗುರುತಿಸಲಾಯಿತು.

**ವಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ವಿ. ವಕೀಲರಿಂದಃ**

ಕೃತ್ಯ ನೆಡೆಯಲಾಯಿತು ಎಂದು ಹೇಳುವ ಸ್ಥಳಕ್ಕೆ ನಾನು ಭೇಟಿ ನೀಡಿರುವುದಿಲ್ಲ. ಕೋಟನಾಯಕನಹಳ್ಳಿಯಲ್ಲಿ ಎಷ್ಟು ಜನ ಶಿವಶಂಕರ್ ಎಂಬುವರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಮಹಜರಿನಲ್ಲಿ ಬಟ್ಟೆ ಬ್ಯಾಗ್ ಎಂದು ನಮೂದು ಮಾಡಿದ್ದು ಅದನ್ನು ಅಮಾನತುತ ಪಡಿಸಿಕೊಂಡಿಲ್ಲ. ಪಂಚನಾಮೆಯಲ್ಲಿ ಮು.ಮಾ.1 ರ ಮ್ಯಾನುಫ್ಯಾಕ್ಚರಿಂಗ್ ಡೇಟ್ ಮತು ಬ್ಯಾಚ್ ನಂಬರನು ನಮೂದು ಮಾಡಿಲ್ಲ ಎಂದರೆ ಸರಿ , ಮ,ಮಾ1 ಟೆಟಾರ ಪ್ಯಾ. ಗಳನ್ನು ಎಲ್ಲಂದ ಖರೀದಿ ಮಾಡ್ದಾರೆ ಎಂದು ತನಿಖೆಯಲ್ಲಕಂಡು ಬಂದಿರುವುದಿಲ್ಲ.

ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದಿರುವುದಿಲ್ಲ, ಯಾವುದೇ ಎಫ್ ಎಸಿ ಎಲ್ ವರದಿಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೇ ಯಾವುದೇ ನೋಟೀಸನುನ ನೀಡಿರುವುದಿಲ ಮತ್ತು ಆತನಿನಿಂದ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತನ ವಿರುದ್ದ ಯಾವುದೇ ಸಾಕ್ಷಾಧಾರಗಳು ಕಂಡು ಬಂದಿಲ್ಲದೇ ಇದ್ದರೂ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರತ್ತೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**